ಹೇಗೆ ಸಿಕ್ಕಿತು? ಯಾರು ತಂದು ಕೊಟ್ರಂತೆ?'
'ಅದೂ..'
ಅಷ್ಟರಲ್ಲಿ ಹೊರಗೆ ಸ್ಕೂಟರ್ ನಿಲುಗಡೆ ಸದ್ದು. ಮರುಕ್ಷಣ ಕಾಲಿಂಗ್ ಬೆಲ್ ಕರೆ ನೀಡಿತು.
ಒಡವೆ ಪ್ರಸಂಗದ ತಿರುವಿಗೆ ಇನ್ನೊಬ್ಬರ ಪ್ರವೇಶ ಆಗ ಬೇಕಿತ್ತೇನೊ?... ಹೀಗೆ ಬಂದವರದು ಬೇರೆಯೇ ಹೆಣೆದ ಕಥೆ. ಕೊಂಡಿ ಮಾತ್ರ ಅದೇ ನೆಕ್ಲೇಸ್!
ಬಾಗಿಲ ಹೊರಗಿದ್ದ ನಾಗೇಶ ಹೆಜ್ಜೆ ಮುಂದುವರಿಸುತ್ತ ಹೆಂಗಸರಿಗೆ ಮುಖಾಮುಖಿಯಾದ, ಹೊಸ್ತಿಲ ಬಳಿಯೇ ನಿಂತಿದ್ದಾತ.
'ಓ ನಾಗೇಶ್. ಏನಿದು ಮಟ ಮಟ ಮಧ್ಯಾಹ್ನ ನಮ್ಮನೆಗೆ? ಇರ್ಲಿ ಬಾ ಒಳಗೆ'
ಚಿನ್ಮಯಿಯ ಅಚ್ಚರಿಯನ್ನು ಗಮನಿಸಿದವನು ಗಡಿಬಿಡಿಯಲ್ಲೆಂಬಂತೆ ಮಾತಿಗೆ ಆರಂಭಿಸಿದ.
'ಅಕ್ಕಾ ನೀವೀಗ ಮದುವೆಗೆ ಹೋಗಿ ಬಂದ್ರಲ್ಲಾ? ಅಲ್ಲಿ ನಿಮ್ಮದಾ ನೆಕ್ಲೇಸ್ ಕಳ್ದು ಹೋದದ್ದು? ಮತ್ತೆ ಸಿಕ್ಕತಲ್ಲಾ?'
'ಹೌದು ಸಿಕ್ಕಿತು. ನಾನೇ ಹೋಗಿ ತಂದೆ, ಅದು ನಂದಲ್ಲ ಅಮ್ಮಂದು ಕೊಂಡಿ ಕಳಚಿ ಬಿದ್ದಿರ್ಬೇಕು ಅದಿರ್ಲಿ ನಿನಗೆ ಹೇಗೆ ಗೊತ್ತಾಯ್ತು ಅದು ? '
'ಅಲ್ಲಿ ಆಫೀಸಿನ ಮೆನೇಜರ್ ನನ್ನ ಪರಿಚಯದವರು ನಾರಾಯಣ ಅಂತ. ಅವ್ರತ್ರ ಮಾತಾಡ್ತಿದ್ದೆ ಅವ್ರು ಹೇಳಿದ್ರು. ನಿಮ್ಮ ಹೆಸರು ಹೇಳಿ ಕಳಕೊಂಡ ನೆಕ್ಲೇಸ್ ಮತ್ತೆ ಸಿಕ್ಕಿದ್ದನ್ನು ಬಂದು ಕೇಳಿ ತಗೊಂಡು ಹೋದ್ರು ಅಂತ . ನೀವೇ ಇರ್ಬೇಕು, ನೇರ ವಿಚಾರಿಸಿಕೊಂಡು ಹೋಗ್ವಾ ಅಂತ ಬಂದೆ'
ವಿವರ ಹೇಳಿ ಮುಗಿಸಿದವ ಮತ್ತೆ ಪ್ರಶ್ನಿಸಿದ 'ಅದಿರ್ಲಿ ಅಲ್ಲಿಗೆ ನೆಕ್ಲೇಸ್ ತಂದು ಕೊಟ್ಟವರು ಯಾರಂತೆ ? ಗೊತ್ತಾಯ್ತಾ ನಿಮಗೆ? ಕೇಳಿದ್ರಾ ನೀವು ?'
ಚಿನ್ಮಯಿ ಕ್ಷಣಕಾಲ ನೇರ ಅವನನ್ನೇ ದಿಟ್ಟಿಸಿದವಳು ಬಳಿಕ ನಿಧಾನಕ್ಕೆ ಉತ್ತರಿಸಿದಳು.
'ಇಲ್ಲ ನಾನು ಕೇಳಿಲ್ಲ.. ಯಾರಾದ್ರೆ ನನ್ಗೇನು? ನಾನು ಮ್ಯಾನೇಜರಿಗೆ ಥ್ಯಾಂಕ್ಸ್ ಹೇಳಿ, ಕೂಡ್ಲೇ ಹೊರಟು ಬಿಟ್ಟೆ. ಇಲ್ಲಿ ಅಮ್ಮ ಟೆನ್ಶನ್ ನಲ್ಲಿ ಇದ್ರಲ್ಲಾ. ಹಾಗೆ'
'ಅದು ನಾನೇ ಅಕ್ಕ. ನೆಕ್ಲೇಸ್ ಅನ್ನು ಬಿದ್ದಲ್ಲಿಂದ ಹೆಕ್ಕಿ ಆಫೀಸಿಗೆ ಕೊಟ್ಟವನು'
ಹೇಳುತ್ತ ಹೇಳುತ್ತ ಅವನ ಮುಖ ಒಮ್ಮೆಲೆ ಜಗ್ಗೆಂದಿತು, ವೋಲ್ಟೇಜ್ ಹೆಚ್ಚಿದ ಬಲ್ಬಿನಂತೆ !
ಮುಗುಳ್ನಗುತ್ತ ನಾಗೇಶ್ ಮತ್ತೆ ತೆರೆದುಕೊಂಡ ..
'ಅಕ್ಕಾ. ನೀವು ಕಳಕೊಂಡ ನೆಕ್ಲೇಸ್ ನಿಮ್ದೇ ಅಂತ ಮೊದ್ಲೇ ಗೊತ್ತಿದ್ರೆ ಸೀದಾ ನಿಮ್ಗೇ ಕೊಡ್ತಿದ್ದೆ ಇರ್ಲಿ ಈಗ್ಲಾದ್ರು ನಿಮ್ಮ ಕೈ ಸೇರಿತಲ್ಲಾ. ಒಳ್ಳೇದಾಯ್ತು'
ನಿರರ್ಗಳ ವರದಿ ಒಪ್ಪಿಸಿದ ಮಿತಭಾಷಿ ! ಆಲಿಸುತ್ತಿದ್ದ ರೋಹಿಣಿಗೆ ಖುಷಿ, ಪ್ರೀತಿ ಎಲ್ಲ ಒಟ್ಟೊಟ್ಟಿಗೆ ಉಕ್ಕಿತ್ತು.
'ಹೌದಾ? ನೀನಾ? ಎಷ್ಟು ದೊಡ್ಡ ಹೆಲ್ಪ್ ಮಾಡಿದ್ದೀ ? ತುಂಬಾ ಥ್ಯಾಂಕ್ಸ್ ನಿನ್ಗೆ .. ದೇವ್ರು ನಿನ್ನನ್ನು ತಣ್ಣಗೆ ಇಟ್ಟಿರ್ಲಪ್ಪಾ'
ಬಾಯಿ ತುಂಬಾ ಹರಸಿಬಿಟ್ಟರು, ಗಳಿಸಿದಾಕೆ, ಊರಗಲ ನಗುತ್ತಲೇ.
ಅಮ್ಮನಿಗಿಂತಲೂ ಎತ್ತರಕ್ಕೇರಿದಳು ಮಗಳು, ಶುಭ ಹಾರೈಕೆಯಲ್ಲಿ, ಅದೂ ಸಕಾಲಿಕ ಔಚಿತ್ಯಪೂರ್ಣವಾದ್ದೇ!
'ಥ್ಯಾಂಕ್ಯೂ ವೆರಿಮಚ್ ನಾಗೇಶ್. ಬೇಗ ಒಳ್ಳೆ ಹುಡುಗಿ ಸಿಕ್ಲಿ ನಿನ್ಗೆ .. ಮುಹೂರ್ತ ಮಂಟಪದಲ್ಲೇ ವಾಲಗ ಊದಿಸುವಂತಾಗ್ಲಿ'.
ಆದರೆ ನಾಗೇಶ ಏನು ಹೇಳಬಹುದಿತ್ತು? ನನ್ನದು ಹೆಲ್ಪ್ ಅಲ್ಲಾ ಅದು ಕರ್ತವ್ಯ ಅಷ್ಟೇ .. ಅದಕ್ಕೂ ನನ್ನ ಮದುವೆಗೂ ಏನು ಸಂಬಂಧ?.. ಎಂಬ ಸಹಜ, ನಿರೀಕ್ಷಿತ ಪ್ರಶ್ನೆ ಹಾಕಲಿಲ್ಲ ಅವನು! ಬದಲಾಗಿ 'ಹಾ' ಎನ್ನುತ್ತಾ ತಲೆದೂಗಿದ! ಮುಗುಳ್ನಗುತ್ತ ಭಾರೀ ಖುಷಿಪಟ್ಟ!
ಆಯ್ತು. ನಾನಿನ್ನು ಬರ್ಲಾ?
ಇಬ್ಬರನ್ನೂ ನೋಡುತ್ತಾ ಅಂದವನು ಸ್ಕೂಟರ್ ಏರಿ ಭರ್‍ರೆಂದ.
ರಪ್ಪನೆ ಬಾಗಿಲು ಹಾಕಿ ಒಳಸರಿದ ಚಿನ್ಮಯಿಗೆ ನಗು ಉಕ್ಕಿ ಹೊನಲಾಯಿತು. ಜತೆಗೆ ವಾಸ್ತವ ತೆರೆದಿಡುವ ತವಕ, ತುಡಿತ.
'ಅಬ್ಬಾ! ಪಕ್ಕಾ ಕಿಲಾಡಿ ನಾಗೇಶ. ಹಸಿ ಹಸೀ ಸುಳ್ಳುಗಾರ ಅಮ್ಮಾ'
'ಯಾಕೆ ಚಿನ್ನು ? ಏನಾಯ್ತು ? ಏನು ಸುಳ್ಳು ಹೇಳಿದ್ದು ಅವ್ನು?'
'ಅವನು ಈಗ ಹೇಳಿದ್ದೆಲ್ಲಾ ಸುಳ್ಳೇ. . ನೆಕ್ಲೇಸ್ ಆಫೀಸಿಗೆ ತಂದು ಕೊಟ್ಟದ್ದು ಅವನಲ್ಲ.. ನಾನು ಆಫೀಸಿನಲ್ಲಿ ಕೇಳುವಾಗ ಹಾಂ.. ಒಂದು ಚಿನ್ನದ ನೆಕ್ಲೇಸ್ ಸಿಕ್ಕಿದೆ. ಅದರ ಗುರ್ತ ಹೇಳಿ' ಅಂದ ಮೆನೇಜರ್.
'ನಾನು ಗುರ್ತ ಎಲ್ಲಿ ಹೇಳಿ ಯಾರು ತಂದು ಕೊಟ್ಟದ್ದು?' ಅಂತ ಕೇಳಿದೆ.
ಅದ್ಕೆ ಅವರು — ಒಬ್ರು ಪ್ರಾಯದ ಹೆಂಗಸು, ಶಾಂತಿ ಅಂತ ಅವ್ರ ಹೆಸರು, ನಾನು ಕಳ್ಕೊಂಡವ್ರ ಪರವಾಗಿ ಅಗ್ಲೇ ಥ್ಯಾಂಕ್ಸ್ ಹೇಳಿ ಕಳ್ಸಿಕೊಟ್ಟೆ ಅವರನ್ನು — ಅಂದ್ರು. ಹಾಗಾದ್ರೆ ನಾಗೇಶ್ ಹೇಳಿದ್ದು ಅಪ್ಪಟ ಸುಳ್ಳಲ್ವಾ?.
ರೋಹಿಣಿ ಬೆಪ್ಪು ಬಡಿದಂತಾಯಿತು .
'ಹೌದು ಸುಳ್ಳೇ ಅಂತ ಆಯ್ತಲ್ಲ?...ಆದ್ರೆ ನೀನ್ಯಾಕೆ ಅಗ್ಲೇ ಅವ್ನಿಗೆ ಅದನ್ನು ಹೇಳಿಲ್ಲ? ಈಗ ನನ್ನತ್ರ ಹೇಳುದ್ಯಾಕೆ?....'
'ನಾನು ಬೇಕಂತ್ಲೇ ಸುಮ್ಮನಿದ್ದೆ ಆಗ ಅಮ್ಮ ,ಏನೂ ಗೊತ್ತಿಲ್ಲದವಳ ಹಾಗೆ ಅವ್ನು ಈ ನೆಕ್ಲೇಸಿನ ಇಡೀ ಸಂದರ್ಭವನ್ನು ತನ್ನ ಲಾಭಕ್ಕಾಗಿ ಉಪಯೋಗಿಸಿಕೊಂಡ ಅಂತ ಆಗ ಅನಿಸಿತು. ಹಾಗೆ ನಮ್ಗೆ ಹೆಲ್ಪ್ ಮಾಡಿದಂಥ ಸುಳ್ಳು ಹೇಳಿ ನಮ್ಗೆ ತುಂಬಾ ಹತ್ತಿರವಾಗುವ ಪ್ಲಾನ್ ಅವನದ್ದು ಅಂತ ನಾನು ಗೆಸ್ ಮಾಡಿದ್ದೆ'
'ಮತ್ತೆ ಒಗಟಾಗಿ ಮಾತಾಡ್ತೀ ನೀನು ? ಹಾಗೆ ಸುಮ್ನೆ ಸುಳ್ಳು ಹೇಳಿದ್ರೆ ಹೇಗೆ ಹತ್ತಿರ ಆಗ್ತಾನೆ? ಬಿಡಿಸಿ ಹೇಳು ಚಿನ್ನು'
ಇನ್ನೂ ಗೊಂದಲದ ಗೂಡಿನಲ್ಲಿದ್ದ ಅವರು ಚಡಪಡಿಸುತ್ತಲೇ ಪ್ರಶ್ನಿಸಿದರು.
ಚಿನ್ಮಯಿ ನಿಧಾನಕ್ಕೆ ಹಂತ ಹಂತದ ವಿವರಣೆಗೆ ತೊಡಗಿಕೊಂಡಳು.
'ಅಮ್ಮ ಕೇಳಿಲ್ಲಿ' .ಚುನಾವಣೆಯ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಹೇಗೋ ಹಾಗೆ ಭಾವೀ ವರನ ಬಗ್ಗೆಯೂ ಒಳ್ಳೆಯ ಅಭಿಪ್ರಾಯ ಪ್ರಚಾರವಾಗುವುದು ಒಳ್ಳೇದು ಅಲ್ಲಾ?.. ನಾಗೇಶನ ಸುಳ್ಳನ್ನು ನಾವು ನಂಬಿ, ಅವನು ಒಳ್ಳೆಯವನು, ಪರೋಪಕಾರಿ ಅಂತ ನಾವು ಪ್ರಚಾರ ಮಾಡಿದ್ರೆ ಅವನಿಗೆ ಲಾಭ,ಅವನ ಮದುವೆಗೆ ಪ್ಲಸ್ ಪಾಯಿಂಟ್ ಅಲ್ವಾ ಅದು? ಅವನು ನಮ್ಮ ಮನೆವರೆಗೂ ವಿಚಾರಿಸ್ಲಿಕ್ಕೆ ಬಂದಾಗ್ಲೇ ನನ್ಗೆ ಡೌಟ್ ಆಯ್ತು,ಆದ್ರೂ ಸುಮ್ಮನಿದ್ದೆ. ಹೋಗ್ಲಿ, ಅವನು ಒಳ್ಳೇಹುಡುಗ ಸರಿ ಅಲ್ವಾ ಅಮ್ಮ?'
ಸರಸರ ಮಾತಿಗೆ ಭರಭರ ನಗುವಿನ ಪೂರ್ಣವಿರಾಮ.ಆಲಿಸುತ್ತಲೇ ಕುಳಿತಿದ್ದ ರೋಹಿಣಿ ತಲೆದೂಗಿದರು, ಸಕಾರಣ ಸುತರ್ಕವನ್ನು ಮನಸಾರೆ ಮೆಚ್ಚಿಕೊಳ್ಳುತ್ತ.
'ಹೌದಲ್ಲ ಚಿನ್ನು ?...ನೂರು ಸುಳ್ಳು ಹೇಳಿ ಒಂದು ಮದುವೆ ಮಾಡು ಅಂತಾರೆ.ಇಲ್ಲಿ ನಾಗೇಶ ಒಂದು ಸುಳ್ಳು ಹೇಳಿದ್ದಾನೆ. ಅಷ್ಟೇ ..ಅದ್ರಲ್ಲೇನೂ ತಪ್ಪಿಲ್ಲ'
ಪಳಗಿದ ಜೀವ ತನಗೆ ಅನಿಸಿದ್ದನ್ನು ತಟ್ಟನೆ ಹೇಳಿಬಿಟ್ಟಿದ್ದರು. ಮಗಳದ್ದು ಮತ್ತೊಮ್ಮೆ ಅದೇ ಒಗ್ಗರಣೆ!
'ಬಾಳಿಗೊಂದೇ ಗೊನೆ. ಬಾಳಿಗೊಂದೇ ಮದುವೆ ಅಲ್ವಾ? ಅಮ್ಮಾ? ವರ ತನ್ನ ಮದುವೆಗಾಗಿ ಒಳ್ಳೇ ವ್ಯಕ್ತಿತ್ವಕ್ಕಾಗಿ ಒಂದೇ ಒಂದು ಸುಳ್ಳು ಹೇಳಿದ್ದಾನೆ. ಯಾರಿಗೂ ತೊಂದರೆ ಆಗದ ಹಾಗೆ. ತನ್ನ ಬಗ್ಗೆ ಮೆಚ್ಚುಗೆ ಮೂಡಲಿ ಅಂತ ಇರ್ಲಿ'
ಇದೀಗ ಇಬ್ಬರ ನಗುವಿನ ಕಲರವದೊಂದಿಗೆ ವಿಷಯಕ್ಕೆ ಇತಿಶ್ರೀ ಹಾಡಿದ್ದಾಯ್ತು.
ದಿನಗಳು ಗಾಲಿಗಳಾಗಿ ಉರುಳತೊಡಗಿದ್ದವು. ಮಗಳು ಅಂದು ಬಿಡಿಸಿಟ್ಟ ಪರಿಚಿತ ಬ್ರಹ್ಮಚಾರಿಯ ಪಾಡು ಮುದಿ ಪಕ್ವಜೀವಿಯ ಮನದಾಳದಲ್ಲಿ ಆಳ ಬೇರುಬಿಟ್ಟು ತಳವೂರಿದ್ದು ಮೆಲ್ಲನೆ ಚಿಗುರ ತೊಡಗಿತ್ತು.
'ಹೌದಲ್ವ?. ಬರೇ ಪಾಪದವನು ನಮ್ಮ ಹಳ್ಳಿಯಲ್ಲಿರುವ ಸುರಭಿಯ ಬಗ್ಗೆ ವಿಚಾರಿಸ್ಬೇಕು.. ಅವ್ಳಿಗೂ ಮೂವತ್ತರ ಹತ್ತಿರ ಆಗಿರ್ಬೇಕು. ಆದ್ರೇ ಈಗ್ಲೇ ಚಿನ್ನುಗೆ ಗೊತ್ತಾಗಬಾರ್ದು ಅವಳ ಪ್ರಯತ್ನಕ್ಕೆ ನಾನೂ ಒಂದು ಕೈ ಜೋಡಿಸಿದ್ರೇನು ? ನೋಡ್ವಾ'.
ಪರಿಶುದ್ಧ ಮನದಲ್ಲಿ ಮೊಳೆತ ಸಹಕಾರದ ಹಾದಿ ಯಾರ ಅರಿವಿಗೂ ಬರುವಂತಿರಲಿಲ್ಲ.. ಹಾಗೇ ಕಾರ್ಯಾಚರಣೆಯೂ..
ಆರು ತಿಂಗಳ ಬಳಿಕ ಅದೊಂದು ಶುಭದಿನ 'ಮುಹೂರ್ತ' ಕಲ್ಯಾಣ ಮಂಟಪದಲ್ಲಿ 'ಸುರಭಿ ವೆಡ್ಸ್ ನಾಗೇಶ್' ಫಲಕ ತೂಗಾಡುತ್ತಿತ್ತು.